**1 ನೇ ಅಧಿಕ ದಿವಾಣಿ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗದಗ**

**CC No. 1866/2022**

**ಡಿ .ಡಬ್ಲ್ಯೂ 01**

| | | |
|---|---|---|
| ಸಾಕ್ಷಿಯ ಹೆಸರು | :- | ಪ್ರಮೋದ |
| ತಂದೆ/ಗಂಡ ಹೆಸರು | :- | ರಾಚಪ್ಪ |
| ವಯಸ್ಸು | :- | 35 ವರ್ಷಗಳು |
| ಉದ್ಯೋಗ | :- | ಕೂಲಿ ಕೆಲಸ |
| ವಾಸ ಸ್ಥಳ | :- | ಬೆಟಗೇರಿ. |

**ದಿನಾಂಕ: 28-02-2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

2019 ರಲ್ಲಿ ದೂರುದಾರಿಗೆ ನಾನು 1 ಲಕ್ಷ ರೂ. ಹಣ ಕೊಡಬೇಕಾಗಿತ್ತು. ದೂರುದಾರರು ಸದರಿ ಮೊತ್ತದಲ್ಲಿ 60,000/- ಕೊಟ್ಟರೆ ಸಾಕು ಎಂದು ರಾಜಿ ಮಾಡಿಕೊಂಡಿರಿರುತ್ತಾರೆ. ಅದರಂತೆ ನಾನು ದೂರುದಾರರಿಗೆ ನಾನು 60,000/- ಕೊಟ್ಟು ಕೇಸ ಮುಗಿಸಿಕೊಂಡಿರುತ್ತೇನೆ. ಆದಾದ ಬಳಿಕ ನಾನು ದೂರುದಾರರೊಂದಿಗೆ ಯಾವುದೇ ಹಣದ ವ್ಯವಹಾರ ಮಾಡಿಲ್ಲ ಮತ್ತು ನಮ್ಮ ನಡುವೆ ಯಾವುದೇ ಸಂಪರ್ಕ ಇರುವುದಿಲ್ಲ.

ನಂತರ ದೂರುದಾರರು ಚೆಕ ಹಾಕಿದಾಗಲೇ ನನಗೆ ಮಾಹಿತಿ ಬಂದಿರುತ್ತದೆ. ನನ್ನ ಮನೆಗೆ ನೋಟಿಸ ಬಂದಾಗಲೇ ಮತ್ತೆ ದೂರುದಾರರು ಪ್ರಕರಣ ದಾಖಲಿಸಿದ ಬಗ್ಗೆ ತಿಳಿದಿರುತ್ತದೆ. ದೂರುದಾರಿಗೆ ನಾನು ಯಾವುದೇ ಹಣ ಕೊಡಲು ಬಾಧ್ಯಸ್ತನು ಇರುವುದಿಲ್ಲ.

ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ ಅವುಗಳನ್ನು ನಿಶಾನೆಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

| ಕ್ರಮ ಸಂಖ್ಯೆ | ದಾಖಲೆಯ ವಿವರ | ನಿಶಾನೆ |
|---|---|---|
| 1 | ಸಿಸಿ ನಂ. 174/2019 ನೇದ್ದರ ಖಾಸಗಿ ಪಿರ್ಯಾದಿಯ ದೃಡೀಕೃತ ಪ್ರತಿ | ನಿಡಿ 1 |
| 2 | ಸಿಸಿ ನಂ. 174/2019 ನೇದ್ದರಲ್ಲಿ ಸಲ್ಲಿಸಿದ ರಾಜಿ ಅರ್ಜಿಯ ದೃಡೀಕೃತ ಪ್ರತಿ | ನಿಡಿಃ 2 |
| 3 | ಸಿಸಿ ನಂ. 174/2019 ನೇದ್ದರ ಆದೇಶ ಪುಟದ ದೃಡೀಕೃತ ಪ್ರತಿ | ನಿಡಿಃ 3 |
| 4 | ಸಿಸಿ ನಂ. 174/2019 ನೇದ್ದರಲ್ಲಿಯ ಚೆಕ, ಬ್ಯಾಂಕನ ಮೆಮೋ, ಲಿಗಲ ನೋಟಿಸ , ಅಂಚೆ ಲಕೋಟೆ, ಲಿಗಲ ನೋಟಿಸಗಳ ದೃಡೀಕೃತ ಪ್ರತಿಗಳು | ನಿಡಿಃ 4 ರಿಂದ 8 |

ದೂರುದಾರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ನನ್ನ ಸಮಕ್ಷಮ

(ಓ.ಹೇ.ಕೇ.ಸ.ಇದೆ)

1 ನೇ ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಗದಗ.

ಸಾಕ್ಷಿದಾರರ ಸಹಿ